# ಭಕ್ತವತ್ಸಲ ಶ್ರೀರಾಮಕೃಷ್ಣ

ಕೆ.ಎಸ್.ಚಂದ್ರಾ

ಭಗವಂತನ ಅನೇಕ ನಾಮಗಳಲ್ಲಿ **ಭಕ್ತವತ್ಸಲ** ಎಂಬುದು ಕೂಡ ಒಂದು. ಹರಿದಾಸರು ತಮ್ಮ ಕೀರ್ತನೆಗಳಲ್ಲಿ ಭಗವಂತನನ್ನು ಭಕ್ತವತ್ಸಲನೆಂದು ಹಾಡಿ ಕೊಂಡಾಡಿರುವರು. ಭಗವಂತನ ಅನಂತ ಕಲ್ಯಾಣ ಗುಣಗಳಲ್ಲಿ ವಾತ್ಸಲ್ಯ ಕೂಡ ಒಂದು.

## ಭಕ್ತ–ಭಕ್ತಿ–ವತ್ಸಲ

**ಭಕ್ತಿ:** ಭಕ್ತಿ ಎಂದರೇನು? ನಾರದ ಭಕ್ತಿಸೂತ್ರ ಹೀಗೆ ಹೇಳುತ್ತದೆ: **ಸಾ ತು ಅಸ್ಮಿನ್ ಪರಮಪ್ರೇಮರೂಪಾ'**– *ಭಕ್ತಿ ಎಂದರೆ ಭಗವಂತನಲ್ಲಿ ಪರಮಪ್ರೇಮವನ್ನು ತೋರುವುದು.* ಇದು ಲೌಕಿಕ ಪ್ರೇಮವಲ್ಲ, ಪರಮಪ್ರೇಮ. ಭಗವಂತನ ಸ್ವರೂಪವೇ ಪ್ರೇಮ. ಏಸು ಕ್ರಿಸ್ತ ಸಹ "ಭಗವಂತ ಎಂದರೆ ಪ್ರೇಮ, ಪ್ರೇಮವೆಂದರೆ ಭಗವಂತ" ಎನ್ನುತ್ತಾನೆ. ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರ ಬಗ್ಗೆ ಹೀಗೆ ಹೇಳುತ್ತಾರೆ, "ಶ್ರೀರಾಮಕೃಷ್ಣರೆಂದರೆ ಪ್ರೇಮಸ್ವರೂಪರು" ಎಂದು. ಸ್ವಯಂ ಶ್ರೀರಾಮಕೃಷ್ಣರೇ ಭಗವತ್ ಪ್ರೇಮವನ್ನು ಹೀಗೆ ವರ್ಣಿಸಿದ್ದಾರೆ: "ಜಗತ್ತನ್ನೇ ಮರೆಯುವಷ್ಟು, ತನ್ನ ದೇಹವನ್ನೇ ಮರೆಯುವಷ್ಟು, ತನಗೆ ಅತ್ಯಂತ ಪ್ರಿಯವಾದ ವಸ್ತುವೇನಿದ್ದರೂ ಅದನ್ನು ಮರೆಯುವಷ್ಟು ಮಟ್ಟಿಗೆ ಭಗವಂತನನ್ನು ಪ್ರೀತಿಸುವುದೇ ಭಗವತ್‌ಪ್ರೇಮ."

**ಭಕ್ತ:** ಭಕ್ತ ಎಂದರೆ ಯಾರು? ಭಗವಂತನಿಗಾಗಿ ಸದಾ ಪರಿತಪಿಸುವವನೇ ಭಕ್ತ ಎಂದು ಎಲ್ಲ ಭಕ್ತಿಗ್ರಂಥಗಳು ಅಭಿಪ್ರಾಯಪಡುತ್ತವೆ. ಶ್ರೀಕೃಷ್ಣನು ಭಗವದ್ಗೀತೆಯಲ್ಲಿ "ಅನನ್ಯನಾಗಿ ಯಾರು ನನ್ನನ್ನು ಚಿಂತಿಸುವರೋ ಅವರ ಯೋಗಕ್ಷೇಮವನ್ನು ನಾನು ವಹಿಸಿಕೊಳ್ಳುವೆ" ಎಂಬ ಭರವಸೆಯನ್ನು ನೀಡಿದ್ದಾನೆ. ಹೀಗೆ ಅನ್ಯ ಚಿಂತೆಯನ್ನು ಬಿಟ್ಟು ಭಗವಂತನನ್ನೇ ಶರಣು ಹೋಗುವುದೇ ಭಕ್ತನ ಗುಣ ಲಕ್ಷಣ ಎಂದು ಸ್ಪಷ್ಟವಾಗಿ ನಮಗೆ ಗೊತ್ತಾಗುತ್ತದೆ.

**ವತ್ಸಲ:** ವಿಷ್ಣುಸಹಸ್ರನಾಮದಲ್ಲಿ 'ವತ್ಸಲ' ಎಂಬ ನಾಮ ಬರುತ್ತದೆ. ವತ್ಸ ಎಂದರೆ ಸಂಸ್ಕೃತದಲ್ಲಿ ಕರು ಎಂದರ್ಥ. ಕರುವಿನ ಬಳಿ ಯಾರಾದರೂ ಸುಳಿದರೆ, ಗೋವು ಪ್ರೇಮದಿಂದ ರಕ್ಷಿಸುತ್ತದೆ. ಹಾಗೆ ತನ್ನಲ್ಲಿ ಉತ್ಸುಕರಾದ ಭಕ್ತರನ್ನು ಮಕ್ಕಳಂತೆ ರಕ್ಷಿಸುತ್ತಾನೆ ಭಗವಂತ. ಅದಲ್ಲದೆ, ತನ್ನಲ್ಲಿ ಶರಣಾದವರಲ್ಲಿ ಪರಮಪ್ರೇಮವನ್ನೂ ತೋರುತ್ತಾನೆ. ಇದನ್ನೇ ವಾತ್ಸಲ್ಯ ಎನ್ನುವರು. ಆದರೆ, ವಾತ್ಸಲ್ಯವೆನ್ನುವುದು ಕೇವಲ ತಾಯಿಯ ಭಾವನೆಗೆ ಮಾತ್ರ ಸೀಮಿತವಲ್ಲ ಎಂದು ಮನೋವಿಜ್ಞಾನಿಗಳು ಅಭಿಪ್ರಾಯ ಪಡುವರು. ವಾತ್ಸಲ್ಯವನ್ನು ಮಾತೃತ್ವ ಪ್ರೇರಣೆ (Mother Motivation) ಎನ್ನುವುದಕ್ಕಿಂತ ಪೋಷಕಪ್ರೇರಣೆ (Parental Motivation) ಎನ್ನುವುದು ಹೆಚ್ಚು ಸೂಕ್ತವೆಂದು ಆಧುನಿಕ ಮನೋವಿಜ್ಞಾನಿಗಳ ಅಭಿಪ್ರಾಯ. ಸಕಲ ಜೀವಿಗಳಲ್ಲೂ ಈ ಪ್ರೇರಣೆ ಅಂತರ್ನಿಹಿತವಾಗಿದೆ ಎಂದು ಅವರ ಅನಿಸಿಕೆ.

## ಭಕ್ತವತ್ಸಲ

ಭಕ್ತವತ್ಸಲ ಎಂಬ ವಿಷ್ಣುವಿನ ನಾಮಕ್ಕೆ ಶ್ರೀಶಂಕರಾಚಾರ್ಯರು, ಶ್ರೀಮಧ್ವಾಚಾರ್ಯರು ಹಾಗೂ ಶ್ರೀವೈಷ್ಣವ ಸಂಪ್ರದಾಯದ ಶ್ರೀ ಪರಾಶರ ಭಟ್ಟರು ತಮ್ಮ ತಮ್ಮ ಮತಗಳಿಗೆ ಅನುಗುಣವಾಗಿ ವ್ಯಾಖ್ಯಾನ ಮಾಡಿದ್ದಾರೆ.

ಮೊದಲು, **ಭಕ್ತವತ್ಸಲ** ಎಂಬ ಪದಕ್ಕೆ ಶ್ರೀಶಂಕರಾಚಾರ್ಯರು ಕೊಟ್ಟಿರುವ ವ್ಯಾಖ್ಯಾನವನ್ನು ನೋಡೋಣ. **ಭಕ್ತಾನಾಂ ಸ್ನೇಹೀತಿ ಭಕ್ತವತ್ಸಲಃ** – ತನ್ನ ಭಕ್ತರಲ್ಲಿ ಅತುಲವಾದ ಪ್ರೇಮವನ್ನು ಹೊಂದಿರುವವನು, ಅವರ ಪಾಪಗಳನ್ನು ನಾಶಮಾಡಿ ಅವರನ್ನು ರಕ್ಷಿಸುವವನು ಎಂದರ್ಥ. ಕಾಳೀಪದ ಘೋಷ್, ಗಿರೀಶ್‌ಚಂದ್ರ ಘೋಷ್ ಮುಂತಾದವರ ಕೆಟ್ಟ ಜೀವನಶೈಲಿಯನ್ನು ಬದಲಿಸಿ ಅವರನ್ನು ಉದ್ಧರಿಸಿದ್ದು ಶ್ರೀರಾಮಕೃಷ್ಣರ ಅಪಾರ ಪ್ರೇಮವೇ.

ಅದಲ್ಲದೆ, ಶ್ರೀರಾಮಕೃಷ್ಣರು ಭಕ್ತರ ಸಂಗವನ್ನು ಸದಾ ಬಯಸುತ್ತಿದ್ದರು. ಸ್ವಾಮಿ ತುರೀಯಾನಂದರು ತಮ್ಮ ಶಿಷ್ಯರೊಡನೆ ಮಾತನಾಡುತ್ತಾ ಒಮ್ಮೆ ಹೀಗೆ ಹೇಳುತ್ತಾರೆ: "ಶ್ರೀರಾಮಕೃಷ್ಣರೊಡನೆ ಒಂದು ಗಂಟೆಯ ಕಾಲ ಭಗವನ್ನಾಮ ಸಂಕೀರ್ತನೆಯಲ್ಲಿ ಪಾಲ್ಗೊಂಡಾಗ ನಮ್ಮೆಲ್ಲರ ಮನಸ್ಸು ಅದೆಷ್ಟು ಎತ್ತರದ ಸ್ತರಕ್ಕೆ ಹೋಗುತ್ತಿತ್ತು! ಆದರೆ ಆಗ ಅದೇಕೆ ಹಾಗೆ ಆಗುತ್ತಿತ್ತು ಎಂದು ಅರ್ಥವಾಗುತ್ತಿರಲಿಲ್ಲ. ಈಗ ನಾವು ಎಷ್ಟೇ ಧ್ಯಾನ ಮಾಡಿದರೂ ಅಂತಹ ದೈವೀ ಆನಂದ ಸಿಗುವುದಿಲ್ಲ."

ನಂತರ, ಪರಾಶರ ಭಟ್ಟರು ನೀಡಿರುವ ವ್ಯಾಖ್ಯಾನವನ್ನು ಗಮನಿಸೋಣ. ಅವರ ಪ್ರಕಾರ ಭಕ್ತವತ್ಸಲನೆಂದರೆ ಭಕ್ತರನ್ನು ಪಡೆದ ಸಂಭ್ರಮದಲ್ಲಿ ಮತ್ತೆಲ್ಲ ಕಾಮಗಳನ್ನು ಮರೆಯುವವನು ಮತ್ತು ತನ್ನ ಭಕ್ತರಿಗಾಗಿ ಯಾವ ಕೆಲಸವನ್ನಾದರೂ ಮಾಡಲು ಹಿಂಜರಿಯದವನು ಎಂದರ್ಥ. ಇದನ್ನು ಸ್ಪಷ್ಟೀಕರಿಸಲು ಶ್ರೀರಾಮಕೃಷ್ಣರ ಜೀವನದಲ್ಲಿ ನಡೆದ ಕೆಲವು ಘಟನೆಗಳನ್ನು ಇಲ್ಲಿ ಉಲ್ಲೇಖಿಸಬಹುದು.

ಒಮ್ಮೆ ರಾಖಾಲ್ (ಮುಂದೆ ಬ್ರಹ್ಮಾನಂದ) ತನಗೆ ಹಸಿವಾಗಿದೆ ಎಂದು ಶ್ರೀರಾಮಕೃಷ್ಣರಿಗೆ ಹೇಳಿದನು. ಅವರ ಹತ್ತಿರ ಅವನಿಗೆ ಕೊಡಲು ಏನೂ ಇರಲಿಲ್ಲ. ಅದಕ್ಕೆ ಅವರು ಬಹಳ ತವಕದಿಂದ ಅತ್ತಿಂದಿತ್ತ ಓಡಾಡುತ್ತಾರೆ; ಗಂಗಾ ತೀರಕ್ಕೆ ಹೋಗಿ, ಜೋರಾಗಿ ಹೇಳುತ್ತಾರೆ: "ರಾಖಾಲನಿಗೆ ಹಸಿವಾಗಿದೆ. ಓ ಗೌರ್‌ದಾಸಿ, ಬೇಗ ಬಾ." ಸ್ವಲ್ಪ ಹೊತ್ತಿಗೆಲ್ಲ ಭಕ್ತೆ ಗೌರೀಮಾ ಬಗೆಬಗೆಯ ತಿಂಡಿಗಳನ್ನು ತಂದುಕೊಡುತ್ತಾಳೆ. ಶ್ರೀರಾಮಕೃಷ್ಣರು ಸಂತಸದಿಂದ ರಾಖಾಲನಿಗೆ ತಿನ್ನಲು ಹೇಳುತ್ತಾರೆ. ಅವನು "ನನಗೆ ಹಸಿವಾಗಿದೆ, ಆದರೆ ಎಲ್ಲರ ಮುಂದೆಯೇ ಯಾಕೆ ಹಾಗೆ ಹೇಳಿದಿರಿ?" ಎಂದು ಮುನಿಸಿಕೊಳ್ಳುತ್ತಾನೆ. ಆಗ ಶ್ರೀರಾಮಕೃಷ್ಣರು ಕೋಪಗೊಂಡ ಮಗುವನ್ನು ರಮಿಸುವ ರೀತಿಯಲ್ಲಿ "ನಿನಗೆ ಹಸಿವಾಗಿದ್ದರೆ ಹಸಿವಾಗಿದೆ ಎನ್ನುವುದು ತಪ್ಪೇ? ಹೋಗಲಿ, ಈಗ ಇದನ್ನು ತೆಗೆದುಕೋ" ಎನ್ನುತ್ತಾರೆ.

**ಭಕ್ತವತ್ಸಲ** – ಈ ನಾಮಕ್ಕೆ ಶ್ರೀಮಧ್ವಾಚಾರ್ಯರು ಆರು ಅರ್ಥಗಳನ್ನು ಕೊಟ್ಟಿದ್ದಾರೆ. ಇವೆಲ್ಲವೂ ಶ್ರೀರಾಮಕೃಷ್ಣರಿಗೆ ಸೂಕ್ತವಾಗಿ ಅನ್ವಯವಾಗುತ್ತವೆ.


(೧) ಮೊದಲನೆಯ ಅರ್ಥ **ಭಕ್ತಾನಾಂ ವತ್ಸಲಃ** – ಭಕ್ತರಲ್ಲಿ ವಾತ್ಸಲ್ಯ ಉಳ್ಳವನು ಎಂದು.

ತಾರಕ್ (ಸ್ವಾಮಿ ಶಿವಾನಂದರು) ಮೊದಲ ಬಾರಿ ಶ್ರೀರಾಮಕೃಷ್ಣರನ್ನು ಕಂಡಾಗ, ತನ್ನ ಮಗುವಿನ ಬರವಿಗಾಗಿ ಬಹುಕಾಲ ಕಾತರದಿಂದ ಕಾಯುತ್ತಿರುವ ಪ್ರೇಮಮಯಿ ತಾಯಿಯ ಹಾಗೆ ಶ್ರೀರಾಮಕೃಷ್ಣರು ಕಂಡುಬಂದರು. ಆಗ ಹೆತ್ತತಾಯಿ ಇಲ್ಲದೆ ತಬ್ಬಲಿಯಾದ ತಾರಕ್ ಶ್ರೀರಾಮಕೃಷ್ಣರ ಮಡಿಲಲ್ಲಿ ತನ್ನ ಮುಖವನ್ನಿಟ್ಟು ಜೋರಾಗಿ ಅತ್ತುಬಿಟ್ಟನು. ಅಂದಿನಿಂದ ಶ್ರೀರಾಮಕೃಷ್ಣರನ್ನು ಮಾತೃಭಾವದಿಂದ ನೋಡಲಾರಂಭಿಸಿದನು.

ಸ್ವಾಮಿ ಪ್ರೇಮಾನಂದರು ಬೇಲೂರು ಮಠಕ್ಕೆ ಬರುತ್ತಿದ್ದ ಭಕ್ತರಲ್ಲಿ ಅಪಾರ ಪ್ರೀತಿಯನ್ನು ತೋರುತ್ತಿದ್ದರು. ಇದರಿಂದ ಅವರು ಭಾವುಕರಾಗಿ ತಾವೆಷ್ಟು ಧನ್ಯರು ಎಂದಾಗ ಪ್ರೇಮಾನಂದರು ಹೀಗೆ ಹೇಳುತ್ತಾರೆ: "ನಾನು ನಿಮ್ಮನ್ನು ಪ್ರೀತಿಸುವೆ ಎನ್ನುವಿರೇನು? ಇಲ್ಲ, ನಿಜಕ್ಕೂ ನನ್ನಲ್ಲಿ ಆ ಪ್ರೀತಿ ಎಂಬುದು ಇದ್ದಿದ್ದರೆ ಅದು ನಮ್ಮೆಲ್ಲರನ್ನೂ ಸದಾಕಾಲ ಪರಸ್ಪರ ಗಾಢವಾಗಿ ಬಂಧಿಸಿಬಿಡುತ್ತಿತ್ತು. ಆಹಾ! ಶ್ರೀರಾಮಕೃಷ್ಣರು ನಮ್ಮನ್ನು ಎಷ್ಟು ಗಾಢವಾಗಿ ಪ್ರೀತಿಸಿದರು! ಅವರಲ್ಲಿನ ಒಂದಂಶವನ್ನು ಕೊಡುವ ಶಕ್ತಿಯೂ ನಮ್ಮಲ್ಲಿಲ್ಲ."

ಸ್ವಾಮಿ ವಿವೇಕಾನಂದರು ತಮ್ಮ ಗುರುಗಳ ಬಗ್ಗೆ ಹೀಗೆ ಹೇಳುತ್ತಿದ್ದರು: "ಶ್ರೀರಾಮಕೃಷ್ಣರು ನಮ್ಮೆಲ್ಲರನ್ನು ಅವರ ಪ್ರೀತಿಯ ಬ್ರಹ್ಮಾಸ್ತ್ರದಿಂದ ಕಟ್ಟಿಹಾಕಿಬಿಡುತ್ತಿದ್ದರು." ಒಮ್ಮೆ ಬಾಬುರಾಂ (ಸ್ವಾಮಿ ಪ್ರೇಮಾನಂದರು) ರಾಮದಯಾಲ ಎಂಬ ಭಕ್ತನೊಂದಿಗೆ ಒಂದು ರಾತ್ರಿ ದಕ್ಷಿಣೇಶ್ವರದಲ್ಲಿ ತಂಗಿದ. ಅವರು ಮಲಗಿಕೊಂಡ ಸ್ವಲ್ಪ ಹೊತ್ತಿನಲ್ಲಿ ಶ್ರೀರಾಮಕೃಷ್ಣರು ರಾಮದಯಾಲನನ್ನು ಎಬ್ಬಿಸಿ "ನೋಡು, ನರೇಂದ್ರನನ್ನು ನೋಡಿ ಬಹಳ ದಿನವಾಯಿತು. ಅವನನ್ನು ಇಲ್ಲಿ ಬರಹೇಳುವೆಯಾ? ನಾನು ಅವನನ್ನು ನೋಡದಿದ್ದರೆ ನನ್ನ ಹೃದಯ ಹಿಂಡಿದಂತೆ ಆಗುವುದು" ಎಂದರು. ಅವರ ಧ್ವನಿಯಲ್ಲಿ ಎಷ್ಟು ಕಾತರವಿತ್ತು! ರಾಮದಯಾಲ ಖಂಡಿತವಾಗಿ ಹೇಳುವೆ ಎಂದ ಮೇಲೆಯೇ ಶ್ರೀರಾಮಕೃಷ್ಣರು ಒಳಗೆ ಮಲಗಲು ಹೋದರು. ಆದರೆ ಸ್ವಲ್ಪ ಹೊತ್ತಾದ ಮೇಲೆ ಮತ್ತೊಮ್ಮೆ ಬಂದು ತವಕದಿಂದ ಅದೇ ಮಾತುಗಳನ್ನು ಹೇಳಿದರು. ಹೀಗೆಯೇ ೩–೪ ಬಾರಿ ನಡೆಯಿತು. "ಇಂತಹ ಮಹಾಪುರುಷರು ಒಬ್ಬ ತರುಣನಿಗಾಗಿ ಈ ರೀತಿ ಪರಿತಪಿಸುವರಲ್ಲ! ಆ ಯುವಕನದು ಅದೆಂಥಹ ಕಠಿಣಹೃದಯ!" ಎಂದು ಬಾಬುರಾಂ ಮನಸ್ಸಿನಲ್ಲೇ ಅಂದುಕೊಂಡ.

ಸ್ವಾಮಿ ವಿವೇಕಾನಂದರು, ಅವರು ರಚಿಸಿರುವ ಆರಾತ್ರಿಕ ಗಾನದಲ್ಲಿ ಶ್ರೀರಾಮಕೃಷ್ಣರನ್ನು 'ಪ್ರೇಮ ಪಾಥಾರ್', 'ನಿಷ್ಕಾರಣ ಭಕತಶರಣ' – ಎಂದೆಲ್ಲ ವರ್ಣಿಸಿರುವರು. ಅದರ ಅರ್ಥ ಕ್ರಮವಾಗಿ, 'ಪ್ರೇಮದ ಸಾಗರ', 'ಯಾವುದೇ ಕಾರಣವಿಲ್ಲದೆ ಭಕ್ತರನ್ನೂ ಶರಣಾದವರನ್ನೂ ಪ್ರೀತಿಸುವವನು' ಎಂದು.



(೨) ಈಗ ಎರಡನೆಯ ಅರ್ಥವನ್ನು ನೋಡೋಣ. **ಭಕ್ತಃ ವತ್ಸ ಇವ ಲಾಲ್ಯತೇ ಇತಿ ಭಕ್ತವತ್ಸಲಃ** –ಭಕ್ತನನ್ನು ತನ್ನ ಪುತ್ರನಂತೆ ಲಾಲಿಸುವವನು. ಈ ಅರ್ಥಕ್ಕೆ ಪುಷ್ಟಿಕೊಡುವ ಅನೇಕ ಘಟನೆಗಳನ್ನು ಶ್ರೀರಾಮಕೃಷ್ಣರ ಜೀವನದಲ್ಲಿ ನಾವು ಕಾಣಬಹುದು. ಅವರು ರಾಖಾಲ್‌ನನ್ನು ಪುತ್ರಭಾವದಿಂದ ಕಾಣುತ್ತಿದ್ದರು. ರಾಖಾಲ್ ಕೂಡ ಶ್ರೀರಾಮಕೃಷ್ಣರೊಂದಿಗೆ ಬಹಳ ಸಲಿಗೆಯಿಂದ ಇರುತ್ತಿದ್ದನು. ಅದಲ್ಲದೆ, ನರೇಂದ್ರ, ಪೂರ್ಣಚಂದ್ರ ಮುಂತಾದ ಯುವಭಕ್ತರು ಬಹಳ ದಿನ ದಕ್ಷಿಣೇಶ್ವರಕ್ಕೆ ಬಾರದಿದ್ದರೆ, ಶ್ರೀರಾಮಕೃಷ್ಣರು ತಾವೇ ಗಾಡಿ ಮಾಡಿಕೊಂಡು ಕೊಲ್ಕತಾಗೆ ಹೋಗಿ ಅವರಿಗೆಲ್ಲ ಸಿಹಿತಿಂಡಿಯನ್ನು ತಿನ್ನಿಸಿ ಬರುತ್ತಿದ್ದರು.

(೩) ಮೂರನೆಯ ಅರ್ಥ ಹೀಗಿದೆ: **ಭಕ್ತಾಃ ವತ್ಸಾ ಇವ ಭಕ್ತವತ್ಸಾಃ, ತಾನ್ ರಕ್ಷಣೀಯತ್ವೇನ ಲಾತಿ, ಆದದಾತಿ ಇತಿ ಭಕ್ತವತ್ಸಲಃ**– ಭಕ್ತರನ್ನು ಮಕ್ಕಳಂತೆ ರಕ್ಷಣೆಗೆ ಅರ್ಹರನ್ನಾಗಿ ಸ್ವೀಕರಿಸುವವನು. ಶ್ರೀರಾಮಕೃಷ್ಣರ ಬಳಿಗೆ ಎಲ್ಲ ರೀತಿಯ ಜನರು ಬರುತ್ತಿದ್ದರು. ಪಾಪಿ, ತಾಪಿ, ಸಾಧು, ನೀತಿವಂತ ಇತ್ಯಾದಿ. ಯಾರು ಅವರಲ್ಲಿ ಅನನ್ಯಶರಣರಾಗಿ ಅವರನ್ನು ರಕ್ಷಣೆಗಾಗಿ ಬೇಡುತ್ತಿದ್ದರೋ ಅವರೆಲ್ಲರನ್ನೂ ಶ್ರೀರಾಮಕೃಷ್ಣರು ಕಾಪಾಡುತ್ತಿದ್ದರು.

ಸ್ವಾಮಿ ವಿವೇಕಾನಂದರು ಅಮೇರಿಕಾದಲ್ಲಿ ಒಬ್ಬರ ಮನೆಯಲ್ಲಿ ನಡೆದ ಸಂತೋಷಕೂಟಕ್ಕೆ, ಅತಿಥಿಗಳಾಗಿ ಹೋಗಿದ್ದರು. ಅವರು ನೀಡಿದ ಕಾಫಿಯನ್ನು ಇನ್ನೇನು ಕುಡಿಯುವುದರಲ್ಲಿದ್ದಾಗ, ಬಟ್ಟಲಲ್ಲಿ ಶ್ರೀರಾಮಕೃಷ್ಣರು ಕಾಣಿಸಿಕೊಂಡು "ಇದನ್ನು ಕುಡಿಯಬೇಡ, ಇದು ವಿಷ" ಎಂದು ಎಚ್ಚರಿಸಿದರು. ಸ್ವಾಮೀಜಿ ಕಾಫಿಯನ್ನು ಕುಡಿಯದೇ ಬಿಟ್ಟರು.

ಮನಮೋಹನ ಮಿತ್ರನೆಂಬ ಭಕ್ತನಿದ್ದನು. ಶ್ರೀರಾಮಕೃಷ್ಣರಲ್ಲಿ ಅವನಿಗೆ ಅತ್ಯಂತ ಗಾಢವಾದ ಭಕ್ತಿ. ಆದರೆ ಬೇರೆ ಸಾಧಕರನ್ನು

ಕಂಡರೆ ಅಸೂಯೆಯೂ ಇತ್ತು. ತಾನು ತುಂಬ ದೊಡ್ಡ ಭಕ್ತನೆಂಬ ಅಹಂಕಾರ ಬೇರ ಇತ್ತು. ಒಂದು ಭಾನುವಾರ ಶ್ರೀರಾಮಕೃಷ್ಣರು ಇನ್ನೊಬ್ಬ ಭಕ್ತನಾದ ಸುರೇಂದ್ರನಾಥ ಮಿತ್ರನನ್ನು ಎಲ್ಲರೆದುರು ಹೊಗಳಲಾರಂಭಿಸಿದರು. ಶ್ರೀಮಂತನಾದರೂ ಕುಡಿತದ ಚಟಕ್ಕೆ ಬಿದ್ದಿದ್ದ ಸುರೇಂದ್ರನನ್ನು ಅವರು ಹೊಗಳಿದ್ದು ಮನಮೋಹನನಿಗೆ ಸಹಿಸಲಾಗಲಿಲ್ಲ. ಅವನು ತನ್ನ ಮನಸ್ಸಿನಲ್ಲೇ "ನೀವು ನಿಮ್ಮ ಭಕ್ತನೊಂದಿಗೆ ಸುಖವಾಗಿ ಇರಿ!" ಅಂದುಕೊಳ್ಳುತ್ತ ಅಲ್ಲಿಂದ ಹೊರಟುಬಿಟ್ಟನು. ಶ್ರೀರಾಮಕೃಷ್ಣರನ್ನು ನೋಡಲು ಬಹಳ ಕಾಲದವರೆಗೆ ಬರಲೇ ಇಲ್ಲ. ಅದಲ್ಲದೆ, ಕೊಲ್ಕತಾದಿಂದ ದೂರ ವಾಸಿಸತೊಡಗಿದ. ಶ್ರೀರಾಮಕೃಷ್ಣರು ಎಷ್ಟು ಹೇಳಿ ಕಳುಹಿಸಿದರೂ ಬರಲಿಲ್ಲ. ಕೊನೆಗೊಮ್ಮೆ ಭಕ್ತನೊಬ್ಬನೊಡನೆ, ತನಗೆ ಭಕ್ತಿ ಸಿದ್ಧಿಸಿದ ಮೇಲೆ ಬರುವೆನೆಂದು ಹೇಳಿಕಳುಹಿಸಿದ. ಆದರೆ ಆ ಸಮಯದಲ್ಲಿ ಅವನಿಗೆ ತನ್ನ ಕೆಲಸದಲ್ಲಿ ಮನಸ್ಸನ್ನಿಡಲಾಗಲಿಲ್ಲ, ಸದಾ ದಕ್ಷಿಣೇಶ್ವರದ್ದೇ ನೆನಪು.

ಒಂದು ದಿನ ಮನಮೋಹನಮಿತ್ರ ಗಂಗಾಸ್ನಾನಕ್ಕಾಗಿ ಹೋದಾಗ, ದೋಣಿಯೊಂದು ಸ್ನಾನಘಟ್ಟದ ಬಳಿ ಲಂಗರು ಹಾಕಿರುವುದು ಕಂಡಿತು. ಅದರಲ್ಲಿ ಭಕ್ತ ಬಲರಾಮ ಬಸು ಇದ್ದದ್ದು ಕಾಣಿಸಿತು. ಅವನನ್ನು ಕಂಡು ಮನಮೋಹನನಿಗೆ ಆನಂದವಾಗಿ "ನಿಮ್ಮನ್ನು ನೋಡುವ ಭಾಗ್ಯ ನನ್ನದು" ಎಂದ. "ಶ್ರೀರಾಮಕೃಷ್ಣರು ನಿನ್ನನ್ನು ನೋಡಲು ಬಂದಿದ್ದಾರೆ" ಎಂದ ಬಲರಾಮ ಬಸು. ಅಷ್ಟರಲ್ಲಿ ಇನ್ನೊಬ್ಬ ಯುವಭಕ್ತ ನಿರಂಜನ್ ದೋಣಿಯ ಮೇಲ್ಭಾಗದಿಂದ ಬಂದು "ನೀನೇಕೆ ದಕ್ಷಿಣೇಶ್ವರಕ್ಕೆ ಬರುತ್ತಿಲ್ಲ? ಇದರಿಂದ ಶ್ರೀರಾಮಕೃಷ್ಣರಿಗೆ ಆತಂಕವಾಗಿದೆ" ಎಂದನು.

ಅದೇ ಸಮಯದಲ್ಲಿ ಶ್ರೀರಾಮಕೃಷ್ಣರು ಮನಮೋಹನನ್ನು ನೋಡಿ ಸಮಾಧಿಸ್ಥರಾದರು. ಇದರಿಂದ ಮನಮೋಹನನಿಗೆ ತುಂಬ ದುಃಖವಾಗಿ ನೀರಿಗೆ ಹಾರಲು ಹೋದ, ಆದರೆ ನಿರಂಜನ್ ಅವನನ್ನು ಹಿಡಿದುಕೊಂಡನು. ಶ್ರೀರಾಮಕೃಷ್ಣರು ಮನಮೋಹನನನ್ನು ದೋಣಿಯ ಮೇಲಕ್ಕೆ ಬರಹೇಳಿದರು. "ನಿನ್ನ ಬಗ್ಗೆ ತುಂಬ ಆತಂಕವಾಗಿತ್ತು. ಅದಕ್ಕೆ ನಿನ್ನನ್ನು ನೋಡಲು ನಾನೇ ಬಂದುಬಿಟ್ಟೆ" ಎಂದರು. ಮನಮೋಹನ ತನ್ನ ತಪ್ಪನ್ನು ಒಪ್ಪಿಕೊಂಡು ಕಣ್ಣೀರು ಹಾಕಿದ; ಅವರ ಪಾದಗಳಿಗೆರಗಿದ.

(೪) ನಾಲ್ಕನೆಯ ಅರ್ಥ: **ಭಕ್ತಾನಾಂ ವತ್ಸಂ ವಕ್ಷಃ ತಸ್ಮಿನ್ ಲಸತೀತಿ ಭಕ್ತವತ್ಸಲಃ**– ಭಕ್ತರ ಎದೆಯಲ್ಲಿ ಪ್ರಕಾಶಿಸುವವನು.

ಈ ಅರ್ಥದ ಪ್ರಕಾರ, ಶ್ರೀರಾಮಕೃಷ್ಣರು ಭಕ್ತರ ಹೃದಯದಲ್ಲಿ ಸದಾಕಾಲವೂ ಬೆಳಗುತ್ತಿರುವ ಜ್ಯೋತಿ. ಸ್ವಾಮಿ ಅಭೇದಾನಂದರು ತಮ್ಮ ಶ್ಲೋಕ ಒಂದರಲ್ಲಿ **ಹೃದಾಸನೇ ತ್ವಂ ಕೃಪಯಾ ಸದಾ ವೈ ವಸೇತಿ ಯಾಚೇ ಭುವಿ ರಾಮಕೃಷ್ಣಃ** – "ನನ್ನ ಹೃದಯಪೀಠದಲ್ಲಿ ಸದಾಕಾಲವೂ ವಾಸಮಾಡು ಎಂದು ನಾನು ಕೇಳಿಕೊಳ್ಳುತ್ತೇನೆ" ಎಂದು ಶ್ರೀರಾಮಕೃಷ್ಣರನ್ನು ಪ್ರಾರ್ಥಿಸಿದ್ದಾರೆ. ಶ್ರೀರಾಮಕೃಷ್ಣರೇ ಅನೇಕ ಬಾರಿ "ಭಕ್ತನ ಹೃದಯವೇ ಭಗವಂತನ ಬೈಠಕ್ ಖಾನೆ" ಎಂದು ಹೇಳಿದ್ದಾರೆ.

**(೫) ಐದನೆಯ ಅರ್ಥ:** ಭಕ್ತರ ಪುತ್ರನಂತೆ ಇರುವವನು ಭಕ್ತವತ್ಸಲ. ಕೆಲವು ವೇಳೆ, ಭಾವುಕನಾದ ಭಕ್ತನಿಗೆ ಜಗಜ್ಜನಕನಾದ ಭಗವಂತನೂ ಪುತ್ರನಂತೆ ಭಾಸವಾಗುವನು.

ಮಗುವಿನ ಸ್ವಭಾವದ ಶ್ರೀರಾಮಕೃಷ್ಣರು ತಮ್ಮ ಕೈಗೆ ಪೆಟ್ಟಾದಾಗ ಎಲ್ಲರನ್ನೂ "ನನ್ನ ಕೈ ಸರಿಹೋಗುವುದೇ?" ಎಂದು ಕೇಳುತ್ತಿದ್ದರು. ತಮ್ಮ ದೇಹದ ಮೇಲೆ ಮಮತೆ ಇಲ್ಲದ ಈ ಮಹಾಪುರುಷರು ಹೀಗೇಕೆ ನಡೆದುಕೊಂಡರು ಎಂದು ನಮಗೆ ಅನ್ನಿಸಬಹುದು. ಆದರೆ ಶ್ರೀರಾಮಕೃಷ್ಣರ ಸ್ವಭಾವ ಚಿಕ್ಕ ಬಾಲಕನಂತಹದು. ಕೆಲವು ಭಕ್ತರು ಶ್ರೀರಾಮಕೃಷ್ಣರನ್ನು ಮಗುವಿನಂತೆ ಕಾಣುತ್ತಿದ್ದರು. ಅಂಥವರಲ್ಲಿ ಒಬ್ಬಳು ಗೋಪಾಲೇರ್ ಮಾ. ಅವಳು ಶ್ರೀರಾಮಕೃಷ್ಣರನ್ನು ತನ್ನ ಇಷ್ಟದೈವವಾದ ಬಾಲಗೋಪಾಲನಂತೆ ವಾತ್ಸಲ್ಯದಿಂದ ಕಾಣುತ್ತಿದ್ದಳು.

**(೬) ಆರನೆಯ ಅರ್ಥ: ಭಕ್ತಂ ಅನ್ನಂ, ಭಕ್ತಸಮರ್ಪಿತ ಭಕ್ತಸ್ಯ ವತ್ಸಲಃ ಭಕ್ತವತ್ಸಲಃ** – ಭಕ್ತನು ನಿವೇದಿಸಿದ ಅನ್ನ ಅಥವಾ ನೈವೇದ್ಯದಲ್ಲಿ ಸ್ನೇಹವುಳ್ಳವನು. ಒಮ್ಮೆ ಭಕ್ತ ಸುರೇಂದ್ರನಾಥ ಮಿತ್ರ ಶ್ರೀರಾಮಕೃಷ್ಣರನ್ನು ನೋಡಲು ಹೋದಾಗ ಹಣ್ಣುಹೂವುಗಳನ್ನು ತೆಗೆದುಕೊಂಡು ಹೋದ. ತಾನು ಅದಕ್ಕಾಗಿ ಎಷ್ಟು ಖರ್ಚು ಮಾಡಿದೆ ಅಂತಲೂ ಹೇಳಿದ. ಜೊತೆಗೆ ಒಂದು ಮಾತನ್ನು ಹೇಳಿದ: "ಭಗವಂತನು ಭಕ್ತನ ಅಂತರಂಗದ ಪ್ರೀತಿಯನ್ನು ಅರಿತು ಆತ ಕೊಟ್ಟದ್ದನ್ನು ಒಪ್ಪಿಕೊಳ್ಳುವನು." ಎಂದು. ಇದಕ್ಕೆ ಶ್ರೀರಾಮಕೃಷ್ಣರು ತಮ್ಮ ಒಪ್ಪಿಗೆ ಸೂಚಿಸಿದರು. ಅಲ್ಲದೆ ಅವನು ಅರ್ಪಿಸಿದ ಹಾರವನ್ನು ತಮ್ಮ ಕೊರಳಲ್ಲಿ ಧರಿಸಿದರು.

ಮಹಾಭಕ್ತೆಯಾದ ಗೋಪಾಲೇರ್ ಮಾ ಶ್ರೀರಾಮಕೃಷ್ಣರಿಗೆ ವಿವಿಧ ರೀತಿಯ ತಿಂಡಿಗಳನ್ನು ಮಾಡಿಕೊಡುತ್ತಿದ್ದಳು. ಶ್ರೀರಾಮಕೃಷ್ಣರು ಎಲ್ಲರಿಂದಲೂ ಆಹಾರ ಸ್ವೀಕರಿಸುತ್ತಿರಲಿಲ್ಲ. ಪರಿಶುದ್ಧ ಚಾರಿತ್ರ್ಯದವರು ತಂದುಕೊಟ್ಟರೆ ಮಾತ್ರ ಅದನ್ನು ಸ್ವೀಕರಿಸುತ್ತಿದ್ದರು. ಶ್ರೀರಾಮಕೃಷ್ಣರು ಗೋಪಾಲೇರ್ ಮಾಗೆ ಅನೇಕ ಬಾರಿ ತಮಗೆ ಬೇಕಾದ ತಿಂಡಿಗಳನ್ನು ಮಾಡಿಕೊಡುವಂತೆ ಕೇಳುತ್ತಿದ್ದರು ಹಾಗೂ ಅದನ್ನು ಸ್ವೀಕರಿಸುತ್ತಿದ್ದರು.

ಹೀಗೆ, ಶ್ರೀರಾಮಕೃಷ್ಣರು ಭಕ್ತರ, ಶರಣಾಗತರ ಆಶ್ರಯರಾಗಿದ್ದಾರೆ. ಅವರನ್ನು ನೆನೆಯುವುದೇ ಅವರೊಡನೆ ಸತ್ಸಂಗ ಮಾಡಿದಂತೆ. ಅವರನ್ನು ಕುರಿತು ಧ್ಯಾನ ಮಾಡುವುದೇ ಅವರ ಸಾನ್ನಿಧ್ಯವನ್ನು ಅನುಭವಿಸುವ ಸಾಧನೆ. ಹೀಗೆ ಎಲ್ಲ ರೀತಿಯಿಂದಲೂ **ಭಕ್ತವತ್ಸಲ**ರೆಂಬ ನಾಮಧೇಯಕ್ಕೆ ಅರ್ಹರಾದ ಶ್ರೀರಾಮಕೃಷ್ಣರು ನಮ್ಮೆಲ್ಲರನ್ನು ಸದಾ ಸಲಹಲಿ ಎಂದು ಅವರನ್ನು ಪ್ರಾರ್ಥಿಸೋಣ.

**ಭಕ್ತಹಾರ್ದತಮೋಭೇದಿ ದಿವ್ಯಜ್ಯೋತಿಃ ಸ್ವರೂಪಿಣೇ ।**
**ಪ್ರಪನ್ನತ್ರಾಣದೀಕ್ಷಾಯ ರಾಮಕೃಷ್ಣಾಯ ತೇ ನಮಃ ॥**

"ಭಕ್ತರ ಹೃದಯದಲ್ಲಿರುವ ತಮಸ್ಸನ್ನು ಕಳೆಯುವ ದಿವ್ಯಜ್ಯೋತಿ ಸ್ವರೂಪರಾದ, ಭಕ್ತರ ಕಷ್ಟಗಳನ್ನು ಕಳೆಯುವ ದೀಕ್ಷೆಯನ್ನು ತೊಟ್ಟಿರುವ ಶ್ರೀರಾಮಕೃಷ್ಣರಿಗೆ ನಮಸ್ಕಾರಗಳು."